# ಇನ್‌ಬಾಕ್ಸ್

ಅವನಿಗೆ ಅವಳು ರಾಜಕುಮಾರಿ. ಅವಳಿಗೆ ಅವನು ರಾಜಕುಮಾರ. ಅವನಿಗೆ ಅವಳು ಐಶ್ವರ್ಯ ರೈ! ಅವಳಿಗೆ ಅವನು ಸಲ್ಮಾನ್ ಖಾನ್! ಈ ತಿಂಗಳ ಹಿಂದೆ ಅವರಿಬ್ಬರೂ ಫೇಸ್‌ಬುಕ್‌ನಲ್ಲಿ ಪರಿಚಯವಾಗಿ ವಾಟ್ಸ್‌ಆ್ಯಪ್‌ನಲ್ಲಿ ಕ್ಲೋಸ್ ಫ್ರೆಂಡ್ಸ್ ಆಗಿ ಇತ್ತೀಚೆಗೆ ಬಿಡಿಸಲಾರದ ಪ್ರೇಮಿಗಳಾಗಿ ರೂಪಾಂತರಗೊಂಡಿದ್ದರು. ಬಿಡುವಾದಾಗಲೆಲ್ಲ ಗಂಟೆಗಟ್ಟಲೆ ಫೋನಿನಲ್ಲಿ ಮಾತನಾಡಿಕೊಳ್ಳುತ್ತಿದ್ದರಲ್ಲದೆ ವಾಟ್ಸ್‌ಆ್ಯಪ್‌ನಲ್ಲಿ ತಮ್ಮ ತಮ್ಮ ಹೃದಯಗಳನ್ನೇ ಬಿಚ್ಚಿಡುತ್ತಿದ್ದರು. ಇಬ್ಬರೂ ಬೇರೆ ಬೇರೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಒಬ್ಬರಿಗೊಬ್ಬರು ಭೇಟಿಯೂ ಆದರು. ಹೋಟೆಲ್, ಸಿನಿಮಾ ಎಲ್ಲಾ ಮುಗಿದವು. ಇಬ್ಬರೂ ಮದುವೆಯಾಗಲೂ ನಿರ್ಧರಿಸಿದರು. ಒಪ್ಪಿಗೆಯನ್ನು ಪಡೆಯಲು ಅವರಿಬ್ಬರೂ ಅವನ ತಂದೆಯ ಬಳಿ ಹೋದರು.

ಅವನ ಅಪ್ಪ ಫೇಮಸ್ ಸೈಕಾಲಜಿಸ್ಟ್ ಆಗಿದ್ದರು. ನಗುತ್ತಲೇ ಇಬ್ಬರ ಮೊಬೈಲ್ ಫೋನುಗಳನ್ನೂ ಇಸಿದುಕೊಂಡು, ಅವುಗಳನ್ನು ಇಬ್ಬರಿಗೂ ಅದಲು ಬದಲು ಮಾಡಿಕೊಟ್ಟು ಇಬ್ಬರನ್ನೂ ಒಂದೊಂದು ಪ್ರತ್ಯೇಕ ಕೋಣೆಗಳಿಗೆ ಕಳುಹಿಸಿ ಒಂದೊಂದು ಗಂಟೆ ಕಾಲ ಇದ್ದು ಬರಲು ಹೇಳಿದ್ದರು. ಒಂದು ಗಂಟೆಯ ನಂತರ ಹೊರಗಡೆ ಬಂದ ಅವನ ಮತ್ತು ಅವಳ ಮುಖ ಎರಡೂ ಕಪ್ಪಿಟ್ಟಿದ್ದವು. ತಮ್ಮ ತಮ್ಮ ಫೋನುಗಳನ್ನು ತೆಗೆದುಕೊಂಡು ಇಬ್ಬರೂ ಒಬ್ಬರನ್ನೊಬ್ಬರು ಮಾತೂ ಕೂಡ ಆಡದೆ ತಮ್ಮ ತಮ್ಮ ದಾರಿ ಹಿಡಿದಿದ್ದರಲ್ಲದೆ ಇಬ್ಬರೂ ಮತ್ತೊಬ್ಬರ ಫೋನು ನಂಬರನ್ನು ಡಿಲೀಟ್ ಮಾಡಿದ್ದರು! ಇಬ್ಬರ ಇನ್‌ಬಾಕ್ಸ್‌ಗಳೂ ವಿಪರೀತ ಸುಳ್ಳುಗಳನ್ನು, ಅನೈತಿಕ ಹೊಲಸುಗಳನ್ನು ತುಂಬಿಕೊಂಡು ಕರೆಪ್ಟ್ ಆಗಿದ್ದ ಹೃದಯಗಳನ್ನು ಅನಾವರಣಗೊಳಿಸಿದ್ದವು!!

❖

